-   --                          **Civil Misc. 03/2025. RW-1**

**ದಿ: 21-01-2026   ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು:  ಶ್ರೀ ಎಸ್ ಎಸ್ ಐ ಕ್ಯೂ ವಕೀಲರಿಂದ :-**

1. ದಿನಾಂಕ: 23-02-2002 ರಂದು ಮಹ್ಮದಸಾಬ ರವರಿಗೆ ಎಷ್ಟು ವಯಸ್ಸು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಮಹ್ಮದಸಾಬ ಇವರು ಇವತ್ತಿಗೆ ಜೀವಂತವಾಗಿರುವುದಿಲ್ಲ.  ಅವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.  ಅವರು ಅಂದಾಜು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ.  ನಿ ಪಿ-6 ರಲ್ಲಿ ಸ್ವಾಧೀನತೆಯ ರೀತಿ ಕೋರ್ಟ್ ಡಿಕ್ರಿ ಎಂದು ನಮೂದು ಮಾಡಿದ್ದು, ಅದು ಯಾವ ಕೋರ್ಟ್ ಡಿಕ್ರಿ ಆಗಿರುತ್ತದೆ ನನಗೆ ಹೇಳಲು ಆಗುವುದಿಲ್ಲ.  ನಿ ಪಿ-1 ರಂತೆ ಅಸಲು ದಾವಾ ಸಂಖ್ಯೆ 46/2024 ನ್ನು ಮಹ್ಮದಕಾಸಿಂ ಇವರು ಅರ್ಜಿದಾರರ, ರಹೆಮಾನ್‌ಸಾಬ ಮತ್ತು ನಿಮ್ಮ ಮೇಲೆ ಕೋರ್ಟ್ ಡಿಕ್ರಿ ಇದ್ದಾಗ್ಯೂ ಈ ದಾವೆಯನ್ನು ಏಕೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಕಾನೂನು ರೀತಿಯಿಂದ ಹಾಕಿರುತ್ತಾರೆ ಎನ್ನುತ್ತಾರೆ.  ಲಾಲಬೀ ಇವರ ಗಂಡ ಮಹ್ಮದಸಾಬ ಇವರು ತೀರಿಕೊಂಡು ಸುಮಾರು 45 ವರ್ಷಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ.  ನಿ ಪಿ 8 ರ ಪ್ರಕಾರ ದಿನಾಂಕ: 19-10-1984 ರಲ್ಲಿ ಕರ್ನಾಟಕ ಸರಕಾರದ

ವತಿಯಿಂದ ತಹಶೀಲ್ದಾರ ಮಾನ್ವಿ ಇವರು ಅರ್ಜಿದಾರಳಿಗೆ ವಿಧವಾ ವೇತನದ ಆದೇಶ ಮಾಡಿರುತ್ತಾರೆ ಮತ್ತು ಅವರು ಅದನ್ನು ಪಡೆಯುತ್ತಿದ್ದಾರೆ ಎಂದರೆ ಸರಿ. ವಿಧವಾ ವೇತನವನ್ನು ಪಡೆಯಬೇಕೆಂದರೆ ಅವರ ಗಂಡ ಸತ್ತಿರಬೇಕೆಂದರೆ ಸರಿ. ಸಾಕ್ಷಿ ಮುಂದುವರಿದು ಅವರ ಗಂಡನ ಮರಣ ಪ್ರಮಾಣ ಪತ್ರ ಸಲ್ಲಿಸಬೇಕೆಂದು ಹೇಳುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯ ಸಾಕ್ಷಿ ಪ್ರಮಾಣ ಪತ್ರದಲ್ಲಿ ಮಹ್ಮದಸಾಬ ಇವರ ಮರಣ ಪಮಾಣ ಪತ್ರದ ಬಗ್ಗೆ ನಾನು ಹೇಳಿ ಬರೆಸಿಲ್ಲ. ಅರ್ಜಿದಾರಳ ಗಂಡ ಮಹ್ಮದಸಾಬ ಇವರು ಬಹಳ ವರ್ಷಗಳಿಂದೆ ತೀರಿಕೊಂಡಿದ್ದರೂ ಅವರು ಮೌಖಿಕವಾಗಿ ದಾವಾ ಆಸ್ತಿಯನ್ನು ಬಿಟ್ಟುಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ